ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಅಕ್ಟೋಬರ್ 20, 2015

**ಹೆಸರಾಂತ ನಿರ್ದೇಶಕ ಕೆ ಎಸ್ ಎಲ್ ಸ್ವಾಮಿ ಅವರ ನಿಧನಕ್ಕೆ**
**ಮುಖ್ಯಮಂತ್ರಿ ಸಂತಾಪ**

**ಬೆಂಗಳೂರು, ಅಕ್ಟೋಬರ್ 20 :**

*ರವೀ* ಎಂದೇ ಜನಪ್ರಿಯರಾಗಿದ್ದ ಕನ್ನಡ ಚಿತ್ರರಂಗದ ಹೆಸರಾಂತ ನಿರ್ದೇಶಕ ಶ್ರೀ ಕಿಕ್ಕೇರಿ ಲಕ್ಷ್ಮೀನಾರಾಯಣ ಸ್ವಾಮಿ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಬೆಳ್ಳಿತೆರೆಯ ದಿಗ್ಗಜರಾದ ಜಿ. ವಿ. ಅಯ್ಯರ್, ಎಂ. ಆರ್. ವಿಠ್ಠಲ್ ಹಾಗೂ ಪುಟ್ಟಣ್ಣ ಕಣಗಾಲ್ ಅವರ ಗರಡಿಯಲ್ಲಿ ಬೆಳೆದ ಶ್ರೀ ಕೆ. ಎಸ್. ಎಲ್. ಸ್ವಾಮಿ ಅವರು ಚಿತ್ರರಂಗದಲ್ಲಿನ ತಮ್ಮ ಐದು ದಶಕಗಳ ಪಯಣದಲ್ಲಿ ನಿರ್ದೇಶನದ ಜೊತೆಗೆ ನಟನಾಗಿ, ಚಿತ್ರ ಸಾಹಿತಿಯಾಗಿ, ಗಾಯಕನಾಗಿ ಹಾಗೂ ನಿರ್ಮಾಪಕನಾಗಿ ಎಲ್ಲಾ ಮಜಲುಗಳಲ್ಲೂ ಯಶಸ್ಸು ಕಂಡು ಕನ್ನಡ ಜನ ಮಾನಸದಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ.

ಶುಭ ಮಂಗಳ ಚಿತ್ರದಲ್ಲಿ ರವೀ ಅವರು ಹಾಡಿರುವ *ಸೂರ್ಯಂಗೂ ಚಂದ್ರಂಗೂ ಬಂದಾರೆ ಮುನಿಸು ನಗುತಾದ ಭೂತಾಯಿ ಮನಸೂ....* ಕನ್ನಡಿಗರ ನೆನಪಿನಂಗಳದಲ್ಲಿ ಸದಾ ಉಳಿಯುವಂತಹುದಾಗಿದೆ. ಭಾರತದ ಪ್ರಥಮ ಸಂಸ್ಕೃತ ಭಾಷಾ ಚಿತ್ರ ಶಂಕರಾಚಾರ್ಯ ಚಿತ್ರಕ್ಕೆ ಜಿ. ವಿ. ಅಯ್ಯರ್ ಅವರ ಜೊತೆ ಕೆಲಸ ಮಾಡಿದ ಶ್ರೀ ಕೆ. ಎಸ್. ಎಲ್. ಸ್ವಾಮಿ ಅವರು ತದ ನಂತರ ಪುಟ್ಟಣ ಕಣಗಾಲ್ ಅವರ ಅಕಾಲಿಕ ನಿಧನದಿಂದ ಅಪೂರ್ಣವಾಗಿದ್ದ ಮಸಣದ ಹೂವು ಚಿತ್ರವನ್ನು ಪೂರ್ಣಗೊಳಿಸಿದ್ದು ಅವರ ಚಿತ್ರ ಜೀವನದ ಮೈಲಿಗಲ್ಲುಗಳಾಗಿದ್ದವು.

ಹಿರಿತೆರೆಯಲ್ಲಿ ಹಾಗೂ ಕಿರಿತೆರೆಯಲ್ಲಿ ವಿಶೇಷ ಛಾಪನ್ನು ಮೂಡಿಸಿರುವ ಶ್ರೀ ಕೆ. ಎಸ್. ಎಲ್. ಸ್ವಾಮಿ ಅವರು ಪ್ರಗತಿಪರ ಚಿಂತನೆ ಹಾಗೂ ಜಾತ್ಯಾತೀತ ನಿಲುವಿಗೆ ಬದ್ಧರಾಗಿದ್ದರು. *ಪರಮಾರ್ಥಂ ಇದಂ ಶರೀರಂ* ತತ್ವದಲ್ಲಿ ನಂಬಿಕೆ ಇರಿಸಿದ್ದ ಶ್ರೀ ಕೆ. ಎಸ್. ಎಲ್. ಸ್ವಾಮಿ ಅವರು ತಮ್ಮ ನಿಧನಾ ನಂತರ, ನೇತ್ರದಾನ ಹಾಗೂ ದೇಹದಾನ ಮಾಡಬೇಕೆಂದು ಕುಟುಂಬ ಸದಸ್ಯರಿಗೆ ತಿಳಿಸಿದ್ದರು ಎಂಬುದು ಶ್ರೀ ರವೀ ಅವರು ಮಾನವ ಧರ್ಮದ ಪ್ರತಿಪಾದಕರಾಗಿದ್ದರು ಎಂಬುದಕ್ಕೆ ಉತ್ತಮ ಉದಾಹರಣೆ.

ರಾಧಾ ರವೀ ಚಿತ್ರ ಲಾಂಛನದಲ್ಲಿ ಶ್ರೀ ಕೆ. ಎಸ್. ಎಲ್. ಸ್ವಾಮಿ ಅವರು ನಿರ್ಮಿಸಿದ *ಜಂಬೂಸವಾರಿ* ಮಕ್ಕಳ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ದೊರೆತ ಸಂದರ್ಭದಲ್ಲಿ ಮಕ್ಕಳಿಗಾಗಿ ಹಲವು ಸದಭಿರುಚಿಯ ಚಿತ್ರಗಳನ್ನು ನಿರ್ಮಿಸುವ ತಮ್ಮ ಇಚ್ಛೆಯನ್ನು ಬಹಿರಂಗಪಡಿಸಿದ್ದರು. ಅಂತೆಯೇ, ಕಿರು ತೆರೆಗಾಗಿ ಆದಿ ಶಂಕರರ ಜೀವನವನ್ನು ಆಧರಿಸಿ ಧಾರವಾಹಿ ಸಿದ್ಧಪಡಿಸಬೇಕೆಂದು ಕನಸು ಕಂಡಿದ್ದರು. ಕೊನೆಗೂ ಇವೆರಡೂ ಸಾಕಾರಗೊಳ್ಳಲೇ ಇಲ್ಲ ಎಂದು ಶ್ರೀ ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಸ್ನೇಹ ಜೀವಿ ಶ್ರೀ ಕೆ. ಎಸ್. ಎಲ್. ಸ್ವಾಮಿ ಅವರ ನಿಧನದಿಂದ ಚಿತ್ರರಂಗದ ಹಳೆಯ ತಲೆಮಾರಿನ ಕೊಂಡಿಯೊಂದು ಕಳಚಿದಂತಾಗಿದೆ. ಶ್ರೀ ಕೆ. ಎಸ್. ಎಲ್. ಸ್ವಾಮಿ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯನ್ನು ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

***********

ಡಿ ಪಿ ಎಂ